ಎನ್ನುವುದು ಗೊತ್ತಾಯಿತು. ಅವರು ಏನು ಕೇಳಿದ್ದಾರೆ ? ಈ ಸೊಸೈಟಿಗೆ ಕೊಟ್ಟಿರತಕ್ಕಂಥ ಜಮೀನು ಸುಮಾರು 500 ಎಕರೆ ಏನಿದೆ ಅದನ್ನು ಕ್ಯಾನ್ಸಲ್ ಮಾಡಿ ಎಂದು. ಈಗ್ಗೆ 25 ವರ್ಷ ಮುಗಿದಿರುವುದರಿಂದ ಮತ್ತೆ ರಿನ್ಯೂ ಮಾಡಬೇಕಾದ ಸಂದರ್ಭ ಬಂದಿದೆ. ಆ ಜಮೀನನ್ನು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಹಂಚಿಕೆ ಮಾಡಬೇಕೆಂದು ಇದರ ಬಗ್ಗೆ ಅವರು ಮೊದಲೇ ಅರ್ಜಿ ಕೊಟ್ಟಿದ್ದರು. ಅದನ್ನು ರೆವಿನ್ಯೂ ಇಲಾಖೆಗೆ ಬರೆದು ಕಾನೂನು ಪ್ರಕಾರ ಯಾವ ರೀತಿ ಡಿಸ್ಪೋಸ್ ಮಾಡಬೇಕೋ ಆ ರೀತಿ ಮಾಡುವುದಕ್ಕೆ ಹೇಳುತ್ತೇನೆ.

ಉಪಾಧ್ಯಕ್ಷೀಣಿಯವರು:– ಶ್ರೀ ವಾಟಾಳ್ ನಾಗರಾಜ್‌ರವರು ಹಾಗೂ ಶ್ರೀ ಪೆರಿಕಲ್ ಮಲ್ಲಪ್ಪನವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಮಂತ್ರಿಗಳು ಸಮಯವನ್ನು ಕೇಳಿದ್ದಾರೆ. ಅದನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಉಪಾಧ್ಯಕ್ಷೀಣಿಯವರೇ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಜನವರಿ 6ನೇ ತಾರೀಖು ಬೆಳಿಗ್ಗೆ ಕೊಡುತ್ತಾರೆ ಎಂದು ತಿಳಿಸಬಯಸುತ್ತೇನೆ.

ರೆವಿನ್ಯೂ ಸರ್ವೆ ಮತ್ತು ಕಂದಾಯ ನಿಗದಿ

311. ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೆವಿನ್ಯೂ ಸರ್ವೆ ಕಾರ್ಯ ಯಾವಾಗ ಮಾಡಲ್ಪಟ್ಟಿತ್ತು ಮತ್ತು ರೆವಿನ್ಯೂ ಸರ್ವೆ ಮತ್ತು ಕಂದಾಯ ನಿಗದಿ ಮಾಡುವ ಕಾರ್ಯವನ್ನು ಏಕಕಾಲದಲ್ಲಿ ಮಾಡುತ್ತದೆಯೆ ?

ಆ) ಕ್ರಮಬದ್ಧವಾದ ಕಂದಾಯ ನಿಗದಿಪಡಿಸಲು ಜಮೀನುಗಳ ಪುನರ್–ವರ್ಗೀಕರಣ ಮಾಡಲಾಗುತ್ತಿದೆಯೆ ?

ಇ) ಪಟ್ಟಣಗಳನ್ನು ಸರ್ವೆ ಮಾಡಲು ಯಾವುದಾದರೂ ಕಾರ್ಯಕ್ರಮ ರೂಪಿಸಲಾಗಿದೆಯೇ ?

ಈ) ನಗರ ಸಭೆ ಮತ್ತು ಪಟ್ಟಣ ಮಿತಿಯೊಳಗೆ ತುಂಡೀಕರಣ ನಿರ್ಬಂಧವಿದೆಯೇ ? ಮತ್ತು ಅಕ್ರಮ ಬೆಳವಣಿಗೆ ಹಾಗೂ ಅನಧಿಕೃತ ಕಟ್ಟಡವನ್ನು ನಿಯಂತ್ರಿಸಲು ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯಲು ಉಪ–ನೋಂದಣಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಮೂಲ ಭೂಮಾಪನಾ ಕಾರ್ಯ 1863ರಿಂದ 1890ರ ಅವಧಿಯೊಳಗೆ ನಡೆಸಲಾಗಿದೆ. ಸಾಮಾನ್ಯವಾಗಿ ರೆವಿನ್ಯೂ ಸರ್ವೆ ಮತ್ತು ಕಂದಾಯ ನಿಗದಿ ಮಾಡುವ ಕಾರ್ಯವನ್ನು ಏಕ ಕಾಲದಲ್ಲಿ ಮಾಡಬೇಕಾಗುತ್ತದೆ.

ಆ) ಹೌದು.

ಇ) ಹೌದು.

ಈ) ಇಲ್ಲ.

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯು ಕ್ರಮಾಂಕ: ಹೆಚ್‌ಯುಡಿ:775:ಎಂಎನ್‌ಎಕ್ಸ್ 87 (ಭಾಗ) ದಿ: 27.9.1990ರಲ್ಲಿ ಹೊರಡಿಸಲಾದ ಆದೇಶದಲ್ಲಿ ಸೂಚನೆಗಳನ್ನು ನೀಡಿದೆ.

ಶ್ರೀ ಎಸ್. ಶಫಿ ಅಹ್ಮದ್:– ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಮೂಲ ಭೂಮಾಪನ ಕಾರ್ಯವನ್ನು 1863 ರಿಂದ 1890ರ ಅವಧಿಯೊಳಗೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಪುನಃ ಸರ್ವೆಯನ್ನು ಯಾವಾಗ ಮಾಡುತ್ತಾರೆ ಎಂಬ ಬಗ್ಗೆ ನಿಖರವಾಗಿ ಹೇಳಲಿಲ್ಲ. ಅನಂತರ ಈಗ ಟೋಪೊಗ್ರಾಫಿಕಲ್ ಚೇಂಜಸ್ ಏನು ಆಗಿವೆ, ಅದರ ಬಗ್ಗೆ ಕೂಡ ಹೇಳಿಲ್ಲ. ರಸ್ತೆಗಳು, ಬ್ರಿಡ್ಜ್‌ಗಳು, ಚಾನಲ್‌ಗಳು– ಇತ್ಯಾದಿಗಳನ್ನು ಒರಿಜನಲ್ ಸರ್ವೇ ರಿಜಿಸ್ಟರ್‌ನಲ್ಲಿ ಯಾವ ರೀತಿಯಾಗಿ ಅಳವಡಿಸಿಕೊಂಡಿದ್ದೀರಿ ಎಂಬುದನ್ನು ದಯಮಾಡಿ ತಿಳಿಸಬೇಕು. ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯವರ ವ್ಯಾಪ್ತಿಯಲ್ಲಿ ಬರುವ ಪ್ರಶ್ನೆ ಬಗ್ಗೆ ನಿಖರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ನಮ್ಮಲ್ಲಿ ಮೂಲ ಭೂಮಾಪನ ಕಾರ್ಯವು 1863ರಲ್ಲಿ ಶುರುವಾಗಿ 1980ರಲ್ಲಿ ಮುಕ್ತಾಯವಾಯಿತು. ಇದು ಹಿಂದೆ ಹಳೆಯ ಮೈಸೂರು ಭಾಗದಲ್ಲಿ ಪ್ರಾರಂಭವಾಯಿತು. ಅದಾದಮೇಲೆ ಹೈದ್ರಾಬಾದ್ ಕರ್ನಾಟಕದಲ್ಲಿ ಕೂಡ 19ನೇ ಸೆಂಚುರಿಯಲ್ಲಿ ಮಾಡಲಾಯಿತು. ಅದೇ ರೀತಿಯಲ್ಲಿ ಮಹಾರಾಷ್ಟ್ರದಿಂದ ಬಂದಿರತಕ್ಕದ್ದನ್ನ ಕೂಡ ಆ ಸಮಯದಲ್ಲಿಯೇ ಮಾಡಲಾಯಿತು. ಅಲ್ಲಿಂದ ಈಚೆಗೆ ಸರ್ವೆ ಸೆಟಲ್‌ಮೆಂಟ್ ಎಂದು ಯಾವುದೂ ಆಗಿಲ್ಲ. ಆದರೆ ಪ್ಯಾಚ್‌ವರ್ಕ್ಸ್ ಮಾತ್ರ ಆಗುತ್ತಾ ಇದೆ. ಸಂಪೂರ್ಣವಾಗಿ ಆಗುತ್ತಾ ಇಲ್ಲ. ಆದರೆ ಪ್ರತಿ ಮೂವತ್ತು ವರ್ಷಗಳಿಗೆ ಒಂದು ಸಾರಿ ಇದು ಆಗಬೇಕೆಂದು ಇದೆ. ಆದರೆ ಅದು ನಿಯಮ ಎಂದು ನಾನು ಹೇಳುವುದಿಲ್ಲ. ಆದರೆ ಸರ್ವೆ ಸೆಟಲ್‌ಮೆಂಟ್‌ನ್ನು ಮಾಡಬೇಕೆಂಬ ಒಂದು ವಿಚಾರ ಇದ್ದರೂ ಕೂಡ ಅದನ್ನು ಮಾಡಲು ಆಗಲಿಲ್ಲ. 1992ರ ಮಾರ್ಚ್ ತಿಂಗಳಲ್ಲಿ ಡೆಲ್ಲಿಯಲ್ಲಿ ಒಂದು ಕಾನ್‌ಫೆರೆನ್ಸ್ ಆಗಿ ಅಲ್ಲಿ ಈ ವಿಚಾರವು ಪ್ರಸ್ತಾಪಕ್ಕೆ ಬಂತು. ಅಲ್ಲಿ ಸರ್ವೇ ಸೆಟಲ್‌ಮೆಂಟ್ ಏನಿದೆ, ಇದು ಸೆಂಟ್ರಲಿ ಸ್ಪಾನ್ಸರ್ಡ್ ಕೇಡರ್‌ನಲ್ಲಿ ಇರಬೇಕು. 25 ಪರ್‌ಸೆಂಟ್‌ನಷ್ಟು ರಾಜ್ಯ ಸರಕಾರದವರು, 75 ಪರ್‌ಸೆಂಟ್‌ನಷ್ಟು ಕೇಂದ್ರ ಸರಕಾರದವರು ಖರ್ಚನ್ನು ವಹಿಸಿ ರೀಸೆಟಲ್‌ಮೆಂಟ್ ಮಾಡಬೇಕೆಂದು ಪ್ರಪೋಸಲ್ ಒಂದು ಕೇಂದ್ರದ ಮುಂದೆ ಇದೆ. ಆದರೆ ಅವರಿಂದ ಈತನಕ ಯಾವುದೇ ಉತ್ತರಗಳು ಬಂದಿಲ್ಲ. ಅದು ಬಂದ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಶಫಿ ಅಹ್ಮದ್:– ಇದರ ಬಗ್ಗೆ ಕಳೆದ ಸಾರಿ ಮಾನ್ಯ ಖರ್ಗೆಯವರು ಕಂದಾಯ ಸಚಿವರಾಗಿದ್ದಾಗ, ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದರು. ಅದರ ಪ್ರಕಾರ ಎಲ್ಲಾ ರಿಕಾರ್ಡ್ಸ್‌ನ್ನು ಕಂಪ್ಯೂಟರೈಸ್ಡ್ ಮಾಡಿ ಮೈಕ್ರೋ ಫಿಲಮ್ಸ್ ಮಾಡಿ, ತಾಲ್ಲೂಕು ವೈಸ್ ಅದನ್ನು ಸೂಕ್ತ ರೀತಿಯಲ್ಲಿ ಮಾಡುವುದಾಗಿ ತಿಳಿಸಿದ್ದರು. ಇದರ ಬಗ್ಗೆ ವೈಜ್ಞಾನಿಕವಾಗಿ ಸರ್ವೇಯನ್ನು ಕಂಪ್ಯೂಟರ್ ಪದ್ಧತಿಯ ಅಳವಡಿಕೆಯ ಮೂಲಕ ರಿಕಾರ್ಡ್ಸ್ ಮೈಂಟೇನ್ ಮಾಡುವುದಕ್ಕೆ ತಾವುಗಳು ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ? ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ ಸರ್ವೇ ರಿಜಿಸ್ಟರನ್ನು ಸರಿಯಾಗಿ ಇದು ತನಕ ಮಾಡಿಲ್ಲ. ಹೊಸದಾಗಿ ಅಸೆಸ್‌ಮೆಂಟ್ ಕೂಡ ಮಾಡಿಲ್ಲ. ಇದರಿಂದ ಸರಕಾರಕ್ಕೆ ಹೆಚ್ಚಿನ ಒಂದು ರೆವಿನ್ಯೂ ಲಾಸ್ ಆಗುತ್ತಾ ಇರುವುದರಿಂದ, ತಾವುಗಳು ನಿಖರವಾಗಿ ಈ ಒಂದು ಸರ್ವೇ ಸೆಟಲ್‌ಮೆಂಟ್‌ನ್ನು ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ:– ಈ ಕಾರ್ಯವನ್ನು ಎಷ್ಟು ವರ್ಷಗಳಲ್ಲಿ ಮಾಡಿ ಮುಗಿಸುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ:– ಮಾನ್ಯ ಸಚಿವರು ಪಟ್ಟಣ ಪ್ರದೇಶದಲ್ಲಿ ಸರ್ವೆ ಮಾಡಲು

ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ. ಆ ಒಂದು ಕಾರ್ಯವು ಯಾವ ಹಂತದಲ್ಲಿ ಇದೆ ? ಅನೇಕ ನಗರ ಸಭೆಗಳಲ್ಲಿ ಈ ಒಂದು ಸರ್ವೆ ಕಾರ್ಯ ಮಾಡುವುದಕ್ಕೆ ಕಾರ್ಯಕ್ರಮವನ್ನು ನಿಗದಿಪಡಿಸಿ, ಫೀಸ್ ಕಟ್ಟುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಈ ಫೀಸನ್ನು ಕಟ್ಟುವುದಕ್ಕೆ ಸರಕಾರದವರು ಯಾವ ಆದೇಶ ಮಾಡುತ್ತಾರೆ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ರಾಜ್ಯದಲ್ಲಿ ಸುಮಾರು 48 ನಗರಸಭೆಗಳಲ್ಲಿ ಅಂದರೆ ಐದು ಸಾವಿರ ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕಂಥ ನಗರ ಸಭೆಗಳಲ್ಲಿ ಈ ಒಂದು ಸರ್ವೆಯನ್ನು ಮಾಡಬೇಕೆಂದು ಪ್ರಯತ್ನ ಮಾಡಲಾಗಿದೆ. ಕೆಲವು ಕಡೆಗಳಲ್ಲಿ ಇದು ಆಗಿದೆ.

11.40 ಎ.ಎಂ.

ಶ್ರೀ ಡಿ.ಬಿ. ಚಂದ್ರೇಗೌಡ:– ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಸರ್ಕಾರ ತನ್ನ ಒಂದು ನೀತಿಯನ್ನು ಘೋಷಿಸಿದೆ. ಅದು ಬಗರ್ ಹುಕುಂ ಸಾಗುವಳಿ ಭೂಮಿಯನ್ನು ಕನ್‌ಫರ್ಮ್ ಮಾಡತಕ್ಕಂಥಾದ್ದು. ಅದಕ್ಕೆ ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಆ ಸಮಿತಿಗೆ ಇಲ್ಲಿರತಕ್ಕಂತಹ ಶಾಸಕರೆಲ್ಲ ಅಧ್ಯಕ್ಷರೆ. ಈ ಕೆಲಸ ಮಾಡುವುದಕ್ಕೆ ಮುನ್ನಾ, ನಮಗೆ ಯಾವ ಯಾವ ಜಮೀನು ಯಾವ ವಿಭಾಗಕ್ಕೆ ಸೇರಿದ್ದುದು, ಆ ಜಮೀನು ರೆವಿನ್ಯೂ ಇಲಾಖೆಯಲ್ಲಿ ಇರುತ್ತದೋ, ಫಾರೆಸ್ಟ್ ಇಲಾಖೆಯಲ್ಲಿ ಇರುತ್ತದೋ ಅಥವಾ ಇನ್ನು ಯಾವ ಯಾವ ಇಲಾಖೆಗೆ ಸೇರಿ ಹೋಗಿದ್ದಾವೋ ಎನ್ನುವ ಯಾವುದರ ಮಾಹಿತಿಯೂ ಇಲ್ಲ. ಅದರಿಂದ ಈ ಮಾಹಿತಿ ಒದಗಿಸುವವರೆಗೆ ಆ ಕೆಲಸ ನಿಲ್ಲಿಸುವುದೋ ಅಥವಾ ಆ ಕೆಲಸ ಪೂರೈಸಿದ ಮೇಲೆ ನೀವು ಮಾಹಿತಿ ಒದಗಿಸುತ್ತೀರೋ ನಿಮ್ಮ ನೀತಿ, ನಿಮ್ಮ ಸರ್ಕಾರದ ನೀತಿ ಏನು ? ಈ ಬಗರ್ ಹುಕುಂ ಕನ್‌ಫರ್‌ಮೇಷನ್ ವ್ಯವಹಾರದಿಂದ ಈಗ ರಾಜ್ಯದಲ್ಲಿ ವ್ಯಾಪಕವಾಗಿ ಆಗಿರತಕ್ಕಂತಹ ದೊಡ್ಡ ಗೊಂದಲಕ್ಕೆ ಮುಕ್ತಾಯ ಹಾಡುವುದಕ್ಕೆ ನಿಮ್ಮಲ್ಲಿ ಏನಾದರೂ ಬೇರೆ ಆಲೋಚನೆಗಳು ಇದೆಯೋ ?

ಶ್ರೀ ಎಂ. ರಾಜಶೇಖರ ಮೂರ್ತಿ:– ಈ ಬಗರ್ ಹುಕುಂ ಸಾಗುವಳಿ ಬಗ್ಗೆ ಪ್ರತ್ಯೇಕ ಕೊಶ್ಚನ್ ಇದೆ. ಅದಕ್ಕೆ ನಾನು ಉತ್ತರ ಕೊಡುತ್ತೇನೆ. ನಾನು ಸಂಕ್ಷಿಪ್ತವಾಗಿ ಹೇಳಬೇಕಾದರೆ ಈಗ ಸುಮಾರು 10 ಲಕ್ಷ ಚಿಲ್ಲರೆ ಅಪ್ಲಿಕೇಶನ್ ಬಂದಿವೆ. ಅದರಲ್ಲಿ ಒಂದು ಲಕ್ಷ ಚಿಲ್ಲರೆ ಅಪ್ಲಿಕೇಶನ್ ವಿಲೇವಾರಿ ಆಗಿದೆ. ಅದು ಎಲ್ಲಾ ಮುಗಿದ ಮೇಲೆ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಅಪ್ಲಿಕೇಷನ್ ಕಮ್ಯೂನಿಕೇಷನ್ ಆಗದಿದ್ದರೆ ಹೇಗೆ ತೀರ್ಮಾನ ಮಾಡಬೇಕು ? ಸರ್ವೆ ಸೆಟ್ಲ್‌ಮೆಂಟ್ ಕ್ಲಾಸಿಫಿಕೇಷನ್ ಆಗದಿದ್ದರೆ ಹೇಗೆ ಕಮಿಟಿಗಳು ಡಿಸೈಡ್ ಮಾಡಬೇಕು. How do you direct the committees to go ahead with the programme?

ಶ್ರೀ ಎಂ. ರಾಜಶೇಖರ ಮೂರ್ತಿ:– ಇವೆಲ್ಲಾ ಒಂದೇ ಸಾರಿ ಆಗಬೇಕಾಗುತ್ತದೆ. ಕ್ಲಾಸಿಫಿಕೇಷನ್ ಮತ್ತು ಸರ್ವೆ ಎರಡೂ ಒಂದೇ ಸಾರಿ ಆಗಬೇಕಾಗುತ್ತದೆ. ಬೇರೆ ಬೇರೆ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ:– ಸರ್ಕಾರದ ಲೆಕ್ಕದಲ್ಲಿ ಈ ಭೂಮಿ ಯಾವ ತರಹ ವರ್ಗೀಕರಣವಾಗಿದೆ ಎನ್ನುವುದು ಬೇಕು. ಇವತ್ತು ಎಕ್ಸಸೈಜ್ ಅಥವಾ ಗೋಮಾಳವೇ, ಕೆರೆ ಅಂಗಳವೆ, ಇಲ್ಲವೇ ಗುಂಡು ತೋಪೇ ಈ ರೀತಿಯಾಗಿ ವರ್ಗೀಕರಣ ಮಾಡಿದಾಗ ಕೆಲವು ಕಡೆ ಇಂತಹವನ್ನು ಕೊಡಬಾರದು ಅಥವಾ ಕೊಡಬೇಕು ಎಂಬ ನೀತಿ ಇದೆ ಎಂದು ತಾವು ಹೇಳಿದಿರಿ, ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ

ಚಂದ್ರೇಗೌಡರು ಕೇಳಿದ್ದುದು ಏನೆಂದರೆ ಕೆಲವು ಜಮೀನುಗಳಿಗೆ ಇಂತಹ ವರ್ಗೀಕರಣ ಇಲ್ಲವೆನ್ನುವ ಸಂದರ್ಭದಲ್ಲಿ ನಾವು ಏನು ಮಾಡಬೇಕು ಎನ್ನುವ ಪ್ರಶ್ನೆಯನ್ನು ತಮ್ಮ ಮುಂದೆ ಇಟ್ಟಿದ್ದಾರೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಇದು ಸರ್ವೆ ಪ್ರಕಾರ ಕ್ಲಾಸಿಫಿಕೇಷನ್ ಆಗಬೇಕು ಅಂದರೆ, ಅದು ಖುಷ್ಕಿಯೇ, ಬಾಗಾಯ್ತೇ, ತರಿಯೇ ಎನ್ನತಕ್ಕಂಥಾದ್ದು ಅದರಲ್ಲಿ ಬರುತ್ತದೆ.

ಶ್ರೀ ಹೆಚ್. ಏಕಾಂತಯ್ಯ:– ನಿಮ್ಮ ಸರ್ಕಾರಿ ಆಜ್ಞೆಯಲ್ಲಿ ಗುಂಡು ತೋಪು ಇದೆ. ಕೆರೆ–ಅಂಗಳ ಇದೆ, ಫಾರೆಸ್ಟ್ ಇದೆ, ಸೇಂದಿ ವನ ಇದೆ, ಆದ್ದರಿಂದ ಇವನ್ನು ಕೊಡಬಾರದು ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ ಈ ಸರ್ವೆ ನಂಬರ್ ಇಂತಹ ವರ್ಗೀಕರಣಕ್ಕೆ ಸೇರಿದೆ ಎಂಬುದು ಅದರಲ್ಲಿ ಇಲ್ಲ. ಆದ್ದರಿಂದ ಅವರು ಏನು ಮಾಡಬೇಕು ಎಂದು ಅವರ ಪ್ರಶ್ನೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಅವೆಲ್ಲಾ ಸರ್ವೆ ಸೆಟ್ಲ್‌ಮೆಂಟ್ ಆಗುವ ಕಾಲದಲ್ಲಿ ಬರುತ್ತವೆ. ಅವೆಲ್ಲಾ ಎಂಟ್ರಿ ಆಗುತ್ತದೆ. ಈಗ ನಮ್ಮ ಮುಂದಿರತಕ್ಕಂತಹ ಪ್ರಶ್ನೆ ಏನು ಇದೆ, ಸರ್ವೆ ಸೆಟ್ಲ್‌ಮೆಂಟ್, ಅದಕ್ಕೆ ತಕ್ಕಂಥ ಕ್ಲಾಸಿಫಿಕೇಷನ್, ಏನು ಅಂದರೆ ಅದು ತರಿಯೇ, ಖುಷ್ಕಿಯೇ, ಬಾಗಾಯ್ತೇ ಎಂದು. ನೀವು ಕೇಳಿದ ಪ್ರಶ್ನೆ ಅದು ಬೇರೆ. ಸರ್ವೆ ಸೆಟ್ಲ್‌ಮೆಂಟ್ ಮಾಡುವ ಕಾಲದಲ್ಲಿ ಅದೂ ಕೂಡ ಪ್ರತ್ಯೇಕವಾಗಿ ಇದ್ದರೆ ಅದನ್ನು ಮಾಡುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಸಭಾಧ್ಯಕ್ಷಿಣಿಯವರೆ, ಇವರು ಕೇಂದ್ರದ ಒಂದು ಕೇಂದ್ರೀಕೃತ ನೀತಿಯ ಆಧಾರದ ಮೇಲೆ ಈ ಭೂಮಾಪನ ಮಾಡಬೇಕು ಎನ್ನುವ ಸಲಹೆ ಬಂದಿದೆ ಎಂದು ಹೇಳುತ್ತಿದ್ದಾರೆ, ಜೊತೆಗೆ ಇಪ್ಪತ್ತೈದು ಪರ್ಸೆಂಟ್ ಖರ್ಚನ್ನು ರಾಜ್ಯ ಸರ್ಕಾರ, ಎಪ್ಪತ್ತೈದು ಪರ್ಸೆಂಟ್ ಖರ್ಚನ್ನು ಕೇಂದ್ರ ಸರ್ಕಾರ, ಮಾಡಬೇಕೆಂದು ಮಂತ್ರಿಗಳು ಹೇಳಿದರು. ಮತ್ತೆ ಮಾನ್ಯ ಚಂದ್ರೇಗೌಡರು ಮತ್ತು ಮಾನ್ಯ ಏಕಾಂತಯ್ಯನವರು ಹೊಸದಾಗಿ ಕೊಡಬೇಕಾದ ಭೂಮಿಗಳಿಗೆ ಸಂಬಂಧಪಟ್ಟ ಹಾಗೆ ಏನು ಸಮಸ್ಯೆ ಇದೆ ಎಂದು ಹೇಳುತ್ತಿದ್ದರು. ಈಗ ನಾನು ಹೇಳುವುದಕ್ಕೆ ಹೊರಟಿರುವುದು, ಈಗಾಗಲೇ ನಮ್ಮ ಹತ್ತಿರ ಏನು ಇದೆ, ಈ ಒಂದು ಸರಿಯಾದ ಭೂ ಮಾಪನ ಇಲ್ಲದೇ ಎಷ್ಟು ಸಮಸ್ಯೆಗಳು ನಮ್ಮ ಪ್ರತಿ ಹಳ್ಳಿಗಳಲ್ಲಿ ಇವೆ ಎನ್ನುವುದು ಸನ್ಮಾನ್ಯ ಕಂದಾಯ ಮಂತ್ರಿಗಳಿಗೂ ಗೊತ್ತು. ಅವರು ಸಹ ಹಳ್ಳಿಯಿಂದ ಬಂದವರು. ಪ್ರತಿ ದಿವಸ ಜಗಳಗಳು ಇದರಿಂದಲೇ ಆಗುತ್ತಾ ಇದೆ. ಆ ಕಾರಣ ಮಾನ್ಯ ಖರ್ಗೆಯವರು ಕಂದಾಯ ಮಂತ್ರಿಗಳು ಆಗಿದ್ದಾಗ ನಾವೇ ಅವರಿಗೆ ಸಲಹೆ ಕೊಟ್ಟಿದ್ದೆವು. ಅವರು ಎರಡು ಕೋಟಿ ರೂಪಾಯಿ ಖರ್ಚಾಗುತ್ತದೆ ಈ ಭೂ ಮಾಪನ ಮಾಡುವುದಕ್ಕೆ ಎಂದು ಹೇಳಿದ್ದರು. ಆಗ ನಾನು ಹೇಳಿದೆ, ಎಕರೆಗೆ ಎರಡು ರೂಪಾಯಿ ಇದೆ, ಅದನ್ನು ನಾವೇ ಕೊಡಲಿಕ್ಕೆ ತಯಾರು ಇದ್ದೇವೆ, ಕೇಂದ್ರದ ಹಣಕ್ಕಾಗಿ ತಾವು ಕಾಯಬೇಕಾಗಿಲ್ಲ, ದಯವಿಟ್ಟು ಆದಷ್ಟು ಬೇಗ ಭೂ ಮಾಪನ ಮಾಡೋಣ. ಹಿಂದೆ ಮೂಲ ಭೂ ಮಾಪನ ಕಾರ್ಯ 1863ರಿಂದ 1890ರ ಅವಧಿಯೊಳಗೆ ನಡೆಸಲಾಗಿದೆ. ಇದನ್ನು ತಾವು 1992ರಲ್ಲಾದರೂ ತೆಗೆದುಕೊಂಡು ಒಂದು ವರ್ಷದೊಳಗೆ ಮುಗಿಸಿದರೆ ನಮ್ಮ ಹಳ್ಳಿಗಳಲ್ಲಿ ಏನು ಏನು ಜಗಳಗಳು ಇವೆ ಅವನ್ನು ಬಗೆಹರಿಸಿದಂತೆ ಆಗುತ್ತದೆ. ದಯವಿಟ್ಟು ಆ ಕೆಲಸ ಮಾಡಿ.

ಶ್ರೀ ಎಂ. ರಾಜಶೇಖರ ಮೂರ್ತಿ:– ಆದಷ್ಟು ಜಾಗ್ರತೆ ಇದನ್ನು ಮಾಡಲಿಕ್ಕೆ ಪ್ರಯತ್ನ ಪಡುತ್ತೇನೆ.